(**Possum**, ಕಾಂಗರೂಗೆ ಸಮೀಪವಿರುವ ಮತ್ತು ಬೆಕ್ಕಿನಂತೆ ಕಾಣುವ ಪ್ರಾಣಿ), ಪಿಗಿಬಿಲ್ಲಾ (**Piggiebillah**, ಇರುವೆಯನ್ನು ತಿನ್ನುವ ಒಂದು ಪ್ರಾಣಿ), ಜೇನಿನ ಯಾಮ್ (**Honey Yam**), ಕ್ವಾಥಾ (**Quatha**, ಕೆಂಪು ಬಣ್ಣದ ಹಣ್ಣು), ಏನೆಲ್ಲಾ ತಂದಿದ್ದಾಳೆ. ನಾವು ಎಷ್ಟು ದೂರ ಹೋದರೂ ಇದರ ಅರ್ಧವನ್ನು ಕೂಡ ತರಲು ಆಗುವುದಿಲ್ಲ. ಇಂದು ಕಾವಲು ಕೂತು ನೋಡೋಣ."

ಮುಂದಿನ ಸಲ ಮುದುಕಿ ಗೂನುರ್ ತನ್ನ ಕೋಂಬೀ ಒಡನೆ ಹೊರಹೊರಟಾಗ ಇಬ್ಬರೂ ಸೊಸೆಯರು ಮರೆಯಲ್ಲಿ ನಿಂತು ನೋಡಿದರು. ಮುದುಕಿ ನಿಧಾನವಾಗಿ ತನ್ನ ಕೋಂಬೀಯನ್ನ ಎಳೆದುಕೊಂಡು ಹೋಗುತ್ತಿದ್ದಳು. ನಡೆಯುವುದೇ ಕಷ್ಟ ಎನಿಸಿತ್ತು. ಸೊಸೆಯರು ಆಶ್ಚರ್ಯ ಪಟ್ಟರು – 'ಈ ಮುದುಕಿಗೆ ನಡೆಯುವುದಕ್ಕೇ ಆಗುತ್ತಿಲ್ಲ. ಇನ್ನು ಮರ ಹತ್ತಿ ಅಪೋಸಮ್‌ಗಳನ್ನು ಹೇಗೆ ಹಿಡಿದಳು? ಏನೋ ಇದೆ ಇಲ್ಲಿ' ಎಂದುಕೊಂಡು ಕುತೂಹಲದಿಂದ ನೊಡಿದರು.

ತಾಯಿ ಗೂನುರ್ ಒಂದೆಡೆ ನಿಂತು, ಸುತ್ತಾ ನೊಡಿದಳು. ಯಾರೂ ಇಲ್ಲ ಎಂದು ಖಾತರಿ ಮಾಡಿಕೊಂಡಳು. ತನ್ನ ಕೋಂಬಿಯನ್ನು ಸಡಿಲ ಮಾಡಿದಳು. ಅದರೊಳಗಿಂದ ಮಗ ಗೂನುರ್ ಹೊರ ಬಂದು ತನ್ನ ಬೇಟೆಗೆ ಹೊರಟ. ಸೊಸೆಯರು ಮಾತಾಡಿಕೊಂಡರು,

"ಇದೋ ಸಮಾಚಾರ? ಹಾಗಾದರೆ ಗೂನುರ್ ಸಾಯಲಿಲ್ಲ. ಈ ಮುದುಕಿ ಹೇಳಿ ಕೇಳಿ ಮಹಾ ವೈದ್ಯೆ. ಏನೋ ಮಾಡಿ ಅವನನ್ನ ಉಳಿಸಿಕೊಂಡಿದ್ದಾಳೆ. ಆಶ್ಚರ್ಯವೇನೂ ಇಲ್ಲ ಇದರಲ್ಲಿ.''

ಅವರಿಬ್ಬರೂ ಊಹಿಸಿದರು. ಹೇಗೋ ಬದುಕಿಕೊಂಡಿರುವ ಗೂನುರ್ ನಮ್ಮನ್ನು ಕೊಲ್ಲದೇ ಬಿಡುವುದಿಲ್ಲ. ಏನಾದರೂ ಒಳ್ಳೆಯ ಮಾತುಗಳನ್ನಾಡಿ ನಮ್ಮ ಜೀವ ಉಳಿಸಿಕೊಳ್ಳಬೇಕು. ಅವನನ್ನು ಗೆಲ್ಲಬೇಕು, ಹೊಂಚು ಹಾಕಿ ಕುಳಿತರು. ಕೆಲ ಸಮಯದ ನಂತರ, ಮಗನಿಗೆ ಅಪಾಯವಿಲ್ಲವೆಂದು ಬಗೆದು, ತಾಯಿ ಅವನನ್ನು ಅಲ್ಲಿಯೇ ಬಿಟ್ಟು ಮತ್ತೆಲ್ಲೋ ಹೋದಳು. ಅಗ ಅವನ ಹೆಂಡಿರು ಓಡಿಹೋಗಿ ಅವನನ್ನು ಓಲೈಸತೊಡಗಿದರು. ಅವನನ್ನು ಕಂಡು ಬಲು ಆನಂದವಾದ ಹಾಗೆ ನಟಿಸಿದರು.

"ಗೂನುರ್, ನಿನ್ನನ್ನು ನೋಡಿ ನಮಗೆ ಸಂತೋಷ ಉಕ್ಕಿ ಉಕ್ಕಿ ಬರುತ್ತಿದೆ. ಸದ್ಯ, ಬದುಕಿದ್ದೀಯಲ್ಲ. ನಾವು ನೀನು ಅಲ್ಲೇ ಸತ್ತುಹೋದೆ ಎಂದುಕೊಂಡಿದ್ದೆವು. ನೋಡು ಯಾರೋ ನಮ್ಮೆಲ್ಲರನ್ನೂ ಕೊಲ್ಲಲು ಆ ಇಲಿಬಿಲವನ್ನು ತೋಡಿದ್ದರು. ನಾವೂ ಮೋಸ ಹೋದೆವು. ಹೇಗೋ ಎಲ್ಲರೂ ಇನ್ನೂ ಬದುಕಿದ್ದೇವೆ. ಅಲ್ಲಾ, ಒಂದು ಮಾತು. ನೀನು ನಮ್ಮ ಡಾರ್‌ಡರ್ರಿಗೆ ಏಕೆ ಬರುವುದಿಲ್ಲ? ನಮಗಂತೂ ನೀನಿಲ್ಲದೆ ದಿಕ್ಕೇ ತೋರದಾಗಿದೆ. ಬಾ, ನಮ್ಮ ಜೊತೆಯಲ್ಲಿಯೇ ಇರು. ನೆಮ್ಮದಿಯಾಗಿ ಜೀವನ ನಡೆಸೋಣ."

ಗೂನುರ್ ಹೆಂಡಿರ ಮಾತನ್ನು ನಂಬಿದಂತೆ ನಟಿಸಿದ. ಮೂವರೂ ಸಾಕಷ್ಟು ಬೇಟೆಯಾಡಿದರು. ಸಂಗ್ರಹವಾದದ್ದನ್ನೆಲ್ಲಾ ಹೊತ್ತು ಗೂಡಿನತ್ತ ನಡೆದರು. ತಾಯಿ ಗೂನುರ್ ಅತ್ತ ಧಾವಿಸಿ ಬಂದು ಇವರನ್ನು ನೋಡಿ ಒಮ್ಮೆಗೇ ಕಿರುಚಾಡಿದಳು.

"ಪುನಃ ಈ ರಂಡೇರು ನಿನ್ನನ್ನ ಪುಸಲಾಯಿಸಿದರಾ? ಮತ್ತೆ ಇವರು ನಿನ್ನನ್ನು ಸಾಯಿಸಲಿ ಎಂದು ನಾನು ನಿನ್ನನ್ನು ಬದುಕಿಸಿದೆನಾ ಹಾಗಾದರೆ? ಅಂದು ಅವರನ್ನು ನಾನು ಹಾಗೆಯೇ ಬಿಟ್ಟೆ. ಮತ್ತೆ ಅವರು ನಿನ್ನನ್ನು ಕೊಲ್ಲುವ ಪ್ರಯತ್ನ ಮಾಡಿದರೆ ನಾನು ಅವರಿಬ್ಬರನ್ನೂ ಕತ್ತರಿಸಿ ಹಾಕುತ್ತೇನೆ. ಈ ಹೆಂಗಸರು ಅನೇಕ ತರಹದ ಪಿತೂರಿ ಮಾಡುತ್ತಾರೆ. ಇನ್ನುಮುಂದೆ ನಾನು ನಿನ್ನನ್ನು ರಕ್ಷಿಸಲಾರದೇ ಹೋಗಬಹುದು. ಅವರಿಬ್ಬರು ಬೇಕಾದರೆ ಎಲ್ಲೋ ಹೋಗಿ ಬದುಕಿಕೊಳ್ಳಲಿ. ನಿನ್ನ ಜೊತೆ ಮಾತ್ರ ಬೇಡ. ಅವರು ನಿನ್ನನ್ನು ಕೊಲ್ಲಲು ಪ್ರಯತ್ನ ಪಟ್ಟರು. ನಾನು, ನಿನ್ನ ತಾಯಿ, ನಿನ್ನನ್ನು ಕಾಪಾಡಿದೆ. ಆದ್ದರಿಂದ ನೀನು ಈಗ ಅವರ ಸ್ವತ್ತಲ್ಲ, ನನ್ನ ಸ್ವತ್ತು.''